ಶ್ರೀ ಪಿ. ಎಸ್. ರಾಣೆ.—ಮಾನ್ಯ ಸಚಿವರು ಹಳೇವಾಳ, ಮುಂಡಗೋಡು, ಸಿರಸಿ ಇವನ್ನು ಬರಗಾಲ ಪೀಡಿತ ಪ್ರದೇಶಗಳೆಂದು ಸಾರಿದ್ದೇವೆಂದು ಹೇಳಿದ್ದಾರೆ. ಘಟ್ಟದ ಮೇಲಿನ ಸೂಪಾ ತಾಲ್ಲೂಕನ್ನು ಸಹ ಭಾಗಶಃ ಬರಗಾಲ ಪೀಡಿತ ಪ್ರದೇಶ ಎಂದು ಸಾರಬೇಕಾಗಿತ್ತು. ಏತಕ್ಕೆ ಸಾರಲಿಲ್ಲ? ಅದರ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ? ಬರಗಾಲ ಪರಿಹಾರಕ್ಕಾಗಿ ಲಕ್ಷಗಟ್ಟಲೆ ದುಡ್ಡನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತಿದ್ದಾರೆ. ಮೇವಿಗಾಗಿ ೩ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳುತ್ತಾರೆ. ಆ ಮೇವು ಎಲ್ಲಿಗೆ ಹೋಯಿತು ಎಂದು ಗೊತ್ತಿಲ್ಲ. ಬರಗಾಲ ಪೀಡಿತ ಪರಿಹಾರ ಕಾರ್ಯ ಕ್ರಮಗಳು ಏನಿವೆ ಅವುಗಳಲ್ಲಿ ಬಹಳಷ್ಟು ಅವ್ಯವಹಾರ ನಡೆದಿದೆ ಎಂದು ಸಂಶಯ ಬರುತ್ತದೆ. ಈ ಬರಗಾಲವೆಂಬುದು ಕೇವಲ ಜನತಾ ಪಕ್ಷದ ಕಾರ್ಯಕರ್ತರಿಗೆ ಮಾತ್ರ ಬರುತ್ತದೆಯೋ ಅಥವಾ ಎಲ್ಲಾ ಜನರಿಗೆ ಬರುತ್ತದೆಯೊ?

ಅಧ್ಯಕ್ಷರು.—ನೇರವಾಗಿ ಪ್ರಶ್ನೆ ಕೇಳಿ.

ಶ್ರೀ ಪಿ. ಎಸ್. ರಾಣೆ.—ಬರಗಾಲ ಪರಿಹಾರ ಕಾರ್ಯಕ್ರಮ ಕೇವಲ ಜನತಾ ಪಕ್ಷದವರಿಗೆ ಅನ್ವಯವಾಗುತ್ತದೆಯೋ ಅಥವಾ ಎಲ್ಲಾ ಜನರಿಗೆ ಸಂಬಂಧಪಡುತ್ತದೆಯೆ ?

ಅಧ್ಯಕ್ಷರು.—ಇದು ಒಳ್ಳೆಯದಲ್ಲ. ಅವಕಾಶ ಕೊಟ್ಟರೆ ದುರುಪಯೋಗ ಮಾಡಿಕೊಳ್ಳುತ್ತೀರಿ.

ಶ್ರೀ ವೀರಣ್ಣ.—ಮಾನ್ಯ ಅಧ್ಯಕ್ಷರೆ, ಉತ್ತರ ಕನ್ನಡ ಜಿಲ್ಲೆಯಲ್ಲಿ ಇರತಕ್ಕ ತಾಲ್ಲೂಕುಗಳನ್ನು ಸಮಗ್ರವಾಗಿ ಸರ್ವೆಮಾಡಿ ರಿಪೋರ್ಟ್ ತರಿಸಿ ಸೂಕ್ತವಾಗಿರತಕ್ಕ ಕ್ರಮ ಕೈಗೊಳ್ಳುತ್ತೇನೆ. ಯಾವ ಯಾವ ತಾಲ್ಲೂಕು ಬರಪೀಡಿತವಾಗಿದೆ ಅದನ್ನು ಬರಪೀಡಿತ ಪ್ರದೇಶ ಎಂದು ತೀರ್ಮಾನ ಮಾಡುತ್ತೇವೆ.

ಪ್ರೌಢ ಶಾಲೆಗಳಿರುವ ಕಡೆಗಳಲ್ಲೆಲ್ಲಾ ವಿದ್ಯಾರ್ಥಿ ನಿಲಯಗಳನ್ನು ಸ್ಥಾಪಿಸುವ ಬಗ್ಗೆ

೯೨(೫೪೬) ಶ್ರೀ ಪಿ. ಬಿ. ಓಂಕಾರಮೂರ್ತಿ (ಕಡೂರು).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಡೂರು ತಾಲ್ಲೂಕಿನಲ್ಲಿ ಸುಮಾರು ೨೨ ಪ್ರೌಢಶಾಲೆಗಳಿರುವುದು ನಿಜವಲ್ಲವೆ ?

ಆ) ಆ ಪೈಕಿ ಚೌಳಿ ಹಿರಿಯೂರು, ಯಗಟಿ, ಖಿದರ ಮುಂತಾದ ಸ್ಥಳಗಳಲ್ಲಿ ವಿದ್ಯಾರ್ಥಿ ನಿಲಯಗಳಿಲ್ಲದಿರುವ ಬಗ್ಗೆ ಸಾರ್ವಜನಿಕರಿಂದ ಅದರ ಮಂಜೂರಾತಿಗಾಗಿ ಕೋರಿ ಅರ್ಜಿ ಬಂದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೆ?

ಇ) ಹಾಗಿದ್ದಲ್ಲಿ ಆ ಬಗ್ಗೆ ಸರ್ಕಾರದವರು ಕೈಗೊಂಡ ಕ್ರಮವೇನು?

ಈ) ಪ್ರೌಢಶಾಲೆಗಳಿರುವ ಕಡೆಗಳಲ್ಲೆಲ್ಲಾ ವಿದ್ಯಾರ್ಥಿನಿಲಯಗಳನ್ನು ಸ್ಥಾಪಿಸುವುದು ಸರ್ಕಾರದವರ ನಿಲುವಲ್ಲವೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು):—

ಅ) ಕಡೂರು ತಾಲ್ಲೂಕಿನಲ್ಲಿ ೩೬ ಪ್ರೌಢಶಾಲೆಗಳಿವೆ.

ಆ) ಚೌಳಿ ಹಿರಿಯೂರು ಮತ್ತು ಯಗಟಿ ಗ್ರಾಮಗಳಿಂದ ಮಂಜೂರಾತಿಗಾಗಿ ಬೇಡಿಕೆಗಳು ಬಂದಿವೆ. ಆದರೆ ಖಿದರ ಗ್ರಾಮದ ಬಗ್ಗೆ ಅರ್ಜಿ ಬಂದಿರುವುದಿಲ್ಲ.

ಇ) ಆಯವ್ಯಯದಲ್ಲಿ ಸಾಕಷ್ಟು ಹಣ ಒದಗಿಸಲು ಸಾಧ್ಯವಾಗದ ಕಾರಣ ಮಂಜೂರು ಮಾಡಲು ಸಾಧ್ಯವಾಗಿಲ್ಲ.

ಈ) ಆಯವ್ಯಯದಲ್ಲಿ ನಿಗದಿ ಮಾಡಿರುವ ಹಣವನ್ನು ಅನುಸರಿಸಿ ಹಂತ ಹಂತವಾಗಿ ಹೊಸ ವಿದ್ಯಾರ್ಥಿನಿಲಯಗಳನ್ನು ಪ್ರಾರಂಭಮಾಡಲಾಗುವುದು.

ಶ್ರೀ ಪಿ. ಬಿ. ಓಂಕಾರ ಮೂರ್ತಿ.—ಕಡೂರು ತಾಲ್ಲೂಕಿನಲ್ಲಿ ಸುಮಾರು ೩೦-೩೬ ಹೈಸ್ಕೂಲುಗಳಿವೆ. ಅದರಲ್ಲಿ ಸರ್ಕಾರಿ ಹೈಸ್ಕೂಲುಗಳೇ ಜಾಸ್ತಿ. ಚೌಳಿ ಹಿರಿಯೂರು, ಯಗಟಿ ಮತ್ತು ಖಿದರ ಗ್ರಾಮದಲ್ಲಿ ಗೌರ್ನಮೆಂಟ್ ಹೈಸ್ಕೂಲುಗಳು ಪ್ರಾರಂಭವಾಗಿ ೨೫ ವರ್ಷಗಳಾಯಿತು. ಆದರೆ ಇಲ್ಲಿಯವರೆಗೂ ಅಲ್ಲಿ ವಿದ್ಯಾರ್ಥಿನಿಲಯಗಳಿಲ್ಲ. ಒಂದೆರಡು ವರ್ಷದಿಂದ ಇರತಕ್ಕ ಜಾಗದಲ್ಲಿ ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡುತ್ತಿದ್ದೀರಿ. ಮುಂದಿನ ಸಾಲಿನಿಂದ ಆದರೂ ಸರ್ಕಾರಿ ಹೈಸ್ಕೂಲುಗಳು ಇರುವ ಕಡೆಗಳಲ್ಲಿ ವಿದ್ಯಾರ್ಥಿ ನಿಲಯ ಸ್ಥಾಪನೆ ಮಾಡುತ್ತೀರಾ ?

ಶ್ರೀ ಜಿ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೆ, ಕಡೂರು ತಾಲ್ಲೂಕಿನಲ್ಲಿ ೩೬ ಹೈಸ್ಕೂಲುಗಳಿವೆ. ೨೨ ವಿದ್ಯಾರ್ಥಿ ನಿಲಯಗಳಿವೆ. ಹೈಸ್ಕೂಲು ಇದ್ದಲ್ಲಿ ವಿದ್ಯಾರ್ಥಿ ನಿಲಯ ಇರಬೇಕಾದದ್ದು ಅವಶ್ಯಕ. ಅದರಂತೆ ಸಾಕಷ್ಟು ವಿದ್ಯಾರ್ಥಿ ನಿಲಯಗಳನ್ನು ಮಂಜೂರು ಮಾಡಿದ್ದೇವೆ. ಮಾನ್ಯ ಸದಸ್ಯರ ಬೇಡಿಕೆಯನ್ನು ಮುಂದಿನವರ್ಷ ಪರಿಶೀಲಿಸುತ್ತೇವೆ. ಚೌಳಿ ಹಿರಿಯೂರು ಮತ್ತು ಯಗಟಿ ಗ್ರಾಮಗಳಿಂದ ಅರ್ಜಿ ಬಂದಿದೆ. ಅದನ್ನು ಪರಿಶೀಲನೆ ಮಾಡುತ್ತಿದ್ದೇವೆ. ಖಿದರಿ ಯಿಂದ ಅರ್ಜಿ ಯಾವುದೂ ಬಂದಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರಾದ ಎ. ಕೃಷ್ಣಪ್ಪನವರ ಪ್ರಶ್ನೆ ಬೇರೆ ಗ್ರೂಪ್‌ಗೆ ಟ್ರಾನ್ಸ್‌ಫರ್ ಆಗಿದೆ. ಉತ್ತರ ಕೊಡಿಸುತ್ತೇನೆ.

ಶ್ರೀ ಎ. ಕೃಷ್ಣಪ್ಪ.—ನಾನು ೧೦೨ನೇ ಪ್ರಶ್ನೆ ಕೇಳುತ್ತೇನೆ.

ಅಧ್ಯಕ್ಷರು.—ಅದು ಬೇರೆ ಗ್ರೂಪ್‌ಗೆ ಹೋಗಿದೆ. ನಂತರ ಉತ್ತರ ಕೊಡಿಸುತ್ತೇನೆ.

ಕೊಡಗು ಜಿಲ್ಲೆಯಲ್ಲಿ ಸುಂಗಾರು ಮಳೆಯ ಬಗ್ಗೆ

೯೫ (೧೭೯) ಶ್ರೀ ಡಿ. ಎ. ಚಿನ್ನಪ್ಪ (ಮಡಿಕೇರಿ).—ಮಾನ್ಯ ಕಂದಾಯ ಮತ್ತು ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಕೊಡಗು ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಮುಂಗಾರು ಮಳೆಯು ಪೂರ್ತಿಯಾಗಿ ವಿಫಲ ವಾಗಿರುವುದು ನಿಜವೇ ?

ಆ) ಹಾಗಿದ್ದಲ್ಲಿ, ಜಿಲ್ಲಾಧಿಕಾರಿಗಳು ಈ ವಿಷಯ ಕುರಿತು ಸರ್ಕಾರಕ್ಕೆ ವರದಿ ಸಲ್ಲಿಸುವರೇ ?

ಇ) ಹಾಗೂ, ಜಿಲ್ಲಾ ಪರಿಷತ್ತು ಸಹ ಅದೇ ರೀತಿ ಸದರೀ ವಿಷಯ ಕುರಿತು, ವರದಿ ಸಲ್ಲಿಸಿರುತ್ತದೆಯೇ ?

ಈ) ಹಾಗಿದ್ದಲ್ಲಿ, ಸದರೀ ವರದಿಗಳು ಕುರಿತು ಸರ್ಕಾರವು ತೆಗೆದುಕೊಂಡಿರುವ ಕ್ರಮವೇನು ?

ಉ) ಸರ್ಕಾರವು ಕೊಡಗು ಜಿಲ್ಲೆಯನ್ನು ಅಭಾವ ಪೀಡಿತ ಪ್ರದೇಶವೆಂದು ಘೋಷಿಸಲು ಹಾಗೂ ಕೊಡಗಿನ ಜನಾಂಗಕ್ಕೆ ಎಲ್ಲಾ ಅನುಕೂಲಗಳನ್ನು ಒದಗಿಸಲು ಉದ್ದೇಶಿಸಿದೆಯೇ ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಹಾಗೂ ಯೋಜನಾ ಸಚಿವರು).—

ಅ) ಹೌದು.

ಆ) ಹೌದು.

ಇ) ಇಲ್ಲ.

ಈ) ಬರಪೀಡಿತ ಎಂದು ಗುರುತಿಸಿದ ಕೊಡಗು ಜಿಲ್ಲೆಯ ಮೂರು ತಾಲ್ಲೂಕುಗಳಲ್ಲಿ (ಅಂದರೆ ಮಡಿಕೇರಿ, ಸೋಮವಾರಪೇಟೆ ಮತ್ತು ವಿರಾಜಪೇಟೆ) ಸರ್ಕಾರವು ಈ ಕೆಳಕಂಡ ಬರಪರಿಹಾರ ಕಾರ್ಯಕ್ರಮಗಳನ್ನು ಕೈಗೊಂಡಿದೆ.

೧. ಉದ್ಯೋಗ ಅರಸಿ ಬಂದವರಿಗೆ ಉದ್ಯೋಗ ನೀಡುವುದು.

೨. ರೈತರಿಗೆ ಕೃಷಿ ಸಾಮಗ್ರಿ ಚೀಲಗಳನ್ನು (ಮಿನಿ ಕಿಟ್ಸ್) ಒದಗಿಸುವುದು.

೩. ಕುಡಿಯುವ ನೀರಿನ ಅಭಾವವಿರುವಡೆಯಲ್ಲಿ ಅದನ್ನು ಒದಗಿಸುವುದು.

೪. ಮೇವು ಸರಬರಾಜು ಮಾಡುವುದು.